




ಬಿ.ಎಂ.ಶ್ರೀ. ಪ್ರತಿಷ್ಠಾನ (ರಿ).
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ, ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-560004
ಮೊ : 99728 12127

ಇಮೇಲ್: bmsritrust@gmail.com ಜಾಲತಾಣ: bmsri.org



# ಬಿ.ಎಂ.ಶ್ರೀ. ಪ್ರತಿಷ್ಠಾನ(ರಿ.)
# 45ನೇ ವಾರ್ಷಿಕ ಸರ್ವಸದಸ್ಯರ ಸಭೆ
# (2024-2025 ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು)

**ದಿನಾಂಕ: 27-07-2025 ಭಾನುವಾರ ಬೆಳಗ್ಗೆ : 10.30 ಗಂಟೆಗೆ ಸಭೆ**

**ಸ್ಥಳ : ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು**



# ಬಿ.ಎಂ.ಶ್ರೀ. ಪ್ರತಿಷ್ಠಾನ (ರಿ). ಬೆಂಗಳೂರು
## ಕಾರ್ಯಕಾರಿ ಸಮಿತಿ 2024–2025

| ಕ್ರ.ಸಂ | | ಹೆಸರು | ಆಯ್ಕೆಯಾದ ದಿನಾಂಕ | ಫೋಟೋ |
|---|---|---|---|---|
| 1 | ಗೌರವಾಧ್ಯಕ್ಷರು | ಡಾ.ಪಿ.ವಿ.ನಾರಾಯಣ | 30–09–2022 ರಿಂದ<br>03–04–2025ವರೆಗೆ |  |
| 2 | ಅಧ್ಯಕ್ಷರು | ಡಾ. ಬೈರಮಂಗಲ ರಾಮೇಗೌಡ | 07–10–2021 |  |
| 3 | ನಿಕಟಪೂರ್ವ ಅಧ್ಯಕ್ಷರು | ಡಾ. ಆರ್.ಲಕ್ಷ್ಮೀನಾರಾಯಣ | 8–10–2021<br>21.04.2025 ರಿಂದ<br>ಗೌರವಾಧ್ಯಕ್ಷರು |  |
| 4 | ಗೌರವ ಕಾರ್ಯದರ್ಶಿ | ಡಾ. ಶಾಂತರಾಜು | 24–09–2023<br>ಕಾರ್ಯದರ್ಶಿ<br>01–04–2022 ರಿಂದ |  |
| 5 | ಗೌರವ ಕೋಶಾಧಿಕಾರಿ | ಡಾ. ಪ್ರಭಾಕರ ಬೆಳವಾಡಿ | 23–12–2021 ರಿಂದ<br>3.10.2024 ರವರೆಗೆ |  |
| 6 | ಸದಸ್ಯರು | ಶ್ರೀ ಚಂದ್ರಶೇಖರ್ ನಾದೂರು | 28–07–2024<br>03–10–2024 ರಿಂದ<br>ಕೋಶಾಧಿಕಾರಿ |  |
| 7 | ಸದಸ್ಯರು | ಶ್ರೀ ಬಿ.ಆರ್. ರವೀಂದ್ರನಾಥ್ | 30–09–2022 |  |
| 8 | ಸದಸ್ಯರು | ಡಾ.ಎಸ್. ಅನಿಲ್‌ಕುಮಾರ್ | 30–09–2022 |  |
| 9 | ಸದಸ್ಯರು | ಪ್ರೊ.ಜಿ.ಅಶ್ವತ್ಥನಾರಾಯಣ | 30–09–2022 |  |
| 10 | ಸದಸ್ಯರು | ಪ್ರೊ. ಜಿ. ಅಬ್ದುಲ್ ಬಷೀರ್ | 30–09–2022 |  |
| 11 | ಸದಸ್ಯರು | ಶ್ರೀ ಸಂಗಮೇಶ್ ಬಾದವಾಡಗಿ | 30–09–2022 |  |
| 12 | ಸದಸ್ಯರು | ಡಾ. ವಿಜಯಾ ಸುಬ್ಬರಾಜ್ | 24–09–2023 |  |
| 13 | ಸದಸ್ಯರು | ಪ್ರೊ. ಅಶ್ವತ್ಥನಾರಾಯಣ ಶಾಸ್ತ್ರೀ (ನೈಷಧಂ. ಎಸ್ಸೆ) | 24–09–2023 |  |
| 14 | ಸದಸ್ಯರು | ಡಾ. ಎನ್. ಆರ್. ಲಲಿತಾಂಬ | 29–04–2023 |  |
| 15 | ಸದಸ್ಯರು | ಡಾ.ಹೆಚ್.ಎಸ್.ಎಂ. ಪ್ರಕಾಶ್ | 24–09–2023 |  |

| | | | | |
|---|---|---|---|---|
| 16 | ಸದಸ್ಯರು | ಶ್ರೀ ಎಂ.ಕೃಷ್ಣಮೂರ್ತಿ | 28-07-2024 |  |
| 17 | ಸದಸ್ಯರು | ಡಾ. ಎನ್. ಗೋಪಾಲಕೃಷ್ಣ | 28-07-2024 |  |
| 18 | ಸದಸ್ಯರು | ಶ್ರೀ ಎ.ಎನ್. ಅನಂತಮೂರ್ತಿ | 28-07-2024 |  |
| 19 | ಸದಸ್ಯರು | ಶ್ರೀ ಡಿ.ನಂ. ವೆಂಕಟರಮಣಯ್ಯ | 28-07-2024 |  |

# ವಿಷಯ ಸೂಚಿ


| | ಪುಟ |
|---|---|
| 1. ಕಾರ್ಯಕಾರಿ ಸಮಿತಿ 2024–25 | 2–3 |
| 2. ವಿಷಯಸೂಚಿ | 4 |
| 3. 2024–25 ವಾರ್ಷಿಕಾಧಿವೇಶನದ ತಿಳಿವಳಿಕೆ ಪತ್ರ | 5–6 |
| 4. ಶ್ರದ್ಧಾಂಜಲಿ | 7 |
| 5. ಹಿಂದಿನ ವಾರ್ಷಿಕ ಸಭೆಯ ನಡಾವಳಿಗಳ ವರದಿ (2023–2024) | 8–13 |
| 6. 45ನೇ ವಾರ್ಷಿಕ ಸಭೆಯ ವರದಿ | 14–30 |
| 7. 2024–2025ನೇ ಸಾಲಿನ ಲೆಕ್ಕಪರಿಶೋಧಕರು ಪರಿಶೀಲಿಸಿದ ಲೆಕ್ಕಪತ್ರಗಳ ಮಂಡನೆ, ಚರ್ಚೆ, ಅಂಗೀಕಾರ. | |
| 8. 2025–26ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿ (ಮಂಡನೆ, ಚರ್ಚೆ, ಅಂಗೀಕಾರ) | |
| 9. 2025–26ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ | |
| 10. ಸದಸ್ಯರು ನಿಯಮಾನುಸಾರ ಕಳುಹಿಸಿದ ಸೂಚನೆಗಳ ಮಂಡನೆ | |
| 11. ಇತರ ವಿಚಾರಗಳು (ಅಧ್ಯಕ್ಷರ ಅನುಮತಿ ಮೇರೆಗೆ) | |
| 12. ನಿವೃತ್ತರಾಗುತ್ತಿರುವ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಗಳಿಗೆ 2024–2027 ಚುನಾವಣೆ ಮತ್ತು ಫಲಿತಾಂಶ ಪ್ರಕಟಣೆ | |
| 13. ಅಧ್ಯಕ್ಷರ ಸಮಾರೋಪ ಭಾಷಣ | |
| 14. ವಂದನಾರ್ಪಣೆ | |


**ಸೂಚನೆ : ಸಭೆಯ ನಂತರ ಲಘುಭೋಜನ ವ್ಯವಸ್ಥೆ ಇದೆ.**

**ಬಿ.ಎಂ.ಶ್ರೀ. ಪ್ರತಿಷ್ಠಾನ (ರಿ).**
ಬಿ.ಎಂ.ಶ್ರೀ. ಪ್ರತಿಷ್ಠಾನ ರಸ್ತೆ, 3ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು–560004

# 45ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ತಿಳಿವಳಿಕೆ ಪತ್ರ

**ದಿನಾಂಕ : 27–07–2025 ಭಾನುವಾರ ಬೆಳಗ್ಗೆ 10.30ಕ್ಕೆ**
**ಸ್ಥಳ : ಎಂ.ವಿ.ಸೀ. ಸಂಶೋಧನಾ ಕೇಂದ್ರ ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು**

**ಸಭಾಧ್ಯಕ್ಷತೆ : ಡಾ. ಬೈರಮಂಗಲ ರಾಮೇಗೌಡ**

## ಕಾರ್ಯಸೂಚಿ

1. ಸ್ವಾಗತ ಮತ್ತು ಅಗಲಿದ ಸದಸ್ಯರಿಗೆ ಸಂತಾಪ ಸೂಚನೆ.
2. ಸರ್ವಸದಸ್ಯರ ಸಭೆಯ ತಿಳಿವಳಿಕೆ ಪತ್ರವನ್ನು ಓದಿ ಸ್ಥಿರೀಕರಿಸುವುದು.
3. 2024–25ನೇ ಸಾಲಿನ ಆಡಳಿತ ವರದಿಯ ಮಂಡನೆ ಮತ್ತು ಪರಿಶೀಲನೆ ಹಾಗೂ ಅಂಗೀಕರಿಸುವುದು.
4. 2024–25ನೇ ಸಾಲಿನ ಲೆಕ್ಕಪರಿಶೋಧಕರು ಪರಿಶೀಲಿಸಿದ ಲೆಕ್ಕ ಪತ್ರಗಳ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ.
5. 2025–26ನೇ ಸಾಲಿನ ಆಯ–ವ್ಯಯ ಅಂದಾಜು ಪಟ್ಟಿ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ.
6. 2025–26ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು.
7. ಸದಸ್ಯರು ನಿಯಮಾನುಸಾರ ಕಳುಹಿಸಿರುವ ಸೂಚನೆಗಳನ್ನು ಮಂಡಿಸುವುದು.
8. ಇತರ ವಿಚಾರಗಳು (ಅಧ್ಯಕ್ಷರ ಅನುಮತಿ ಮೇರೆಗೆ)
9. ಅಧ್ಯಕ್ಷರ ಭಾಷಣ
10. ವಂದನಾರ್ಪಣೆ.
11. ನಿಯಮಾನುಸಾರ ನಿವೃತ್ತರಾಗುತ್ತಿರುವ ಕಾರ್ಯಸಮಿತಿ ಸದಸ್ಯರ ಸ್ಥಾನಕ್ಕೆ 2025–2028 ಚುನಾವಣೆ.

* * *

## ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾಗುವ ಸದಸ್ಯರಿಗೆ ಸೂಚನೆಗಳು

1. ಸದಸ್ಯರಾಗಿರುವವರಿಗೆ ಮಾತ್ರ ಸರ್ವಸದಸ್ಯರ ಸಭೆಗೆ ಪ್ರವೇಶವಿದೆ.
2. ಸಭೆಯ ಪ್ರಾರಂಭಕ್ಕೆ ಕನಿಷ್ಠ ಸಂಖ್ಯೆಯ ಹಾಜರಾತಿ (ಕೋರಂ) ಇಲ್ಲದಿದ್ದಲ್ಲಿ ಸಭೆ ಮುಂದೂಡಿ ಅರ್ಧಗಂಟೆಯ ನಂತರ ಸಭೆಯನ್ನು ಆರಂಭಿಸಲಾಗುವುದು. ಮುಂದೂಡಿದ ಸಭೆಗೆ ಕೋರಂ ಅವಶ್ಯಕತೆ ಇರುವುದಿಲ್ಲ.
3. ಸಭೆಯಲ್ಲಿ ಮಂಡಿಸಲು ಕಳಿಸುವ ಸಲಹೆ–ಸೂಚನೆಗಳನ್ನು ವಾರ್ಷಿಕ ಸಭೆಯ ದಿನಾಂಕಕ್ಕೆ 7 ದಿನಗಳ ಮುಂಚೆ ಅಂಚೆಯಲ್ಲಿ ಅಥವಾ ಖುದ್ದಾಗಿ ಕಚೇರಿಗೆ ಬಂದು ಲಿಖಿತ ರೂಪದಲ್ಲಿ ಸಲ್ಲಿಸಬೇಕು.
4. ಸರ್ವಸದಸ್ಯರ ಸಭೆಗೆ ಹಾಜರಾಗುವವರು ಸದಸ್ಯತ್ವದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು.
5. ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ಪ್ರತಿಯನ್ನು ಸಭೆಯ ದಿನಾಂಕಕ್ಕೆ ಒಂದು ವಾರ ಮುಂಚಿನಿಂದ ಪ್ರತಿಷ್ಠಾನದ ಕಛೇರಿಯ ಕೆಲಸದ ವೇಳೆಯಲ್ಲಿ ಸದಸ್ಯರು ಪಡೆದುಕೊಳ್ಳಬಹುದು.
6. ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಅಂಚೆ ಮೂಲಕ ಪಡೆಯಲು ಇಚ್ಛಿಸುವವರು ಕೋರಿಕೆ ಸಲ್ಲಿಸಬಹುದು.
7. ಹೆಚ್ಚಿನ ವಿವರಗಳನ್ನು ಫೋನಿನ ಮೂಲಕ ಅಥವಾ ಖುದ್ದಾಗಿ ಅಥವಾ ಅಂಚೆ ಮೂಲಕ ಪಡೆಯಬಹುದು.

**ಡಾ. ಶಾಂತರಾಜು**
**ಗೌರವ ಕಾರ್ಯದರ್ಶಿ**

**ಮಾನ್ಯ ಸದಸ್ಯರೆಲ್ಲರೂ ಸಭೆಗೆ ಸಕಾಲಕ್ಕೆ ದಯಮಾಡಿಸಬೇಕಾಗಿ ಬಿನ್ನಹ**

## 2025–28ರ ಅವಧಿಗೆ ಕಾರ್ಯಕಾರಿ ಸಮಿತಿಯ 5 ಸ್ಥಾನಗಳಿಗೆ ಚುನಾವಣೆ

### ಸದಸ್ಯರಿಗೆ ಸೂಚನೆಗಳು

1. ಮತದಾನ ಮಾಡುವ ಸದಸ್ಯರು ತಮ್ಮ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು.
2. ಸಂಸ್ಥೆಯ ಗುರುತಿನ ಚೀಟಿ ಹೊಂದಿಲ್ಲದವರು ದಿನಾಂಕ 25–07–2025 ಶುಕ್ರವಾರ ಒಳಗೆ ಪ್ರತಿಷ್ಠಾನದಿಂದ ಪಡೆಯಬಹುದು.
3. ಯಾವುದೇ ವಿವರಗಳನ್ನು ಪ್ರತಿಷ್ಠಾನದ ಕಛೇರಿ ವೇಳೆಯಲ್ಲಿ ಖುದ್ದಾಗಿ ಅಥವಾ ದೂರವಾಣಿ ಮೂಲಕ ಪಡೆಯಬಹುದು.

| ಕಛೇರಿಯ ಸಮಯ | ಕಚೇರಿಯ ವಿಳಾಸ |
|---|---|
| **ಸೋಮವಾರದಿಂದ ಶನಿವಾರದವರೆಗೆ** | **ಬಿ.ಎಂ.ಶ್ರೀ. ಪ್ರತಿಷ್ಠಾನ** |
| **ಬೆಳಗ್ಗೆ 10.30 ರಿಂದ ಸಂಜೆ 5.30ರ ವರೆಗೆ.** | **ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, 3ನೇ ಮುಖ್ಯರಸ್ತೆ** |
| **ಕಚೇರಿಯ ಮೊಬೈಲ್ ಸಂಖ್ಯೆ– 9972812127** | **ನರಸಿಂಹರಾಜ ಕಾಲೋನಿ, ಬೆಂಗಳೂರು–560004** |

4. ಚುನಾವಣೆಗೆ ಸಂಬಂಧಿಸಿದ ಯಾವುದೇ ವಿವರಗಳು ಬೇಕಾದಲ್ಲಿ ಅಥವಾ ದೂರುಗಳಿದ್ದಲ್ಲಿ ಭೇಟಿಯಾಗಲು ಕಚೇರಿ ಸಮಯದಲ್ಲಿ ಚುನಾವಣಾಧಿಕಾರಿಗಳು ಲಭ್ಯವಿರುತ್ತಾರೆ.
5. ಚುನಾವಣೆಯಲ್ಲಿ ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಲು ಇಚ್ಛಿಸುವ ಸದಸ್ಯರು ಗೊತ್ತಾದ ಅರ್ಜಿ ನಮೂನೆಯನ್ನು ಭರ್ತಿಮಾಡಿ 09–07–2025 ಶನಿವಾರ ಸಂಜೆ 5–00 ರ ಒಳಗೆ ಕಚೇರಿಯಲ್ಲಿ ಚುನಾವಣಾಧಿಕಾರಿಗೆ ತಲುಪಿಸತಕ್ಕದ್ದು.

**<u>ಚುನಾವಣೆ ವೇಳಾಪಟ್ಟಿ</u>**

| | |
|---|---|
| * ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | 04–07–2025 ಶುಕ್ರವಾರ |
| * ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 09–07–2025 ಬುಧವಾರ |
| * ಉಮೇದುವಾರರ ಪತ್ರಗಳ ಪರಿಶೀಲನೆ ದಿನಾಂಕ | 12–07–2025 ಶನಿವಾರ |
| * ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ | 14–07–2025 ಸೋಮವಾರ |
| * ಉಮೇದುವಾರಿಕೆ ಹಿಂಪಡೆಯುವ ದಿನಾಂಕ | 16–07–2025 ಬುಧವಾರ |
| * ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅಂತಿಮಪಟ್ಟಿ ಪ್ರಕಟಿಸುವ ದಿನಾಂಕ | 21–07–2025 ಸೋಮವಾರ |
| * ಚುನಾವಣೆ ದಿನಾಂಕ | 27–07–2025 ಭಾನುವಾರ |

***2022–2025 ನೇ ಸಾಲಿಗೆ ಆಯ್ಕೆಯಾಗಿ ಈಗ ನಿವೃತ್ತರಾಗಲಿರುವ ಕಾರ್ಯಕಾರಿ ಸಮಿತಿ ಸದಸ್ಯರ ಹೆಸರು**

1. ಪ್ರೊ. ಜಿ. ಅಶ್ವತ್ಥನಾರಾಯಣ
2. ಪ್ರೊ. ಜಿ. ಅಬ್ದುಲ್ ಬಷೀರ್
3. ಶ್ರೀ ಬಿ.ಆರ್. ರವೀಂದ್ರನಾಥ್
4. ಡಾ. ಎಸ್. ಅನಿಲ್ ಕುಮಾರ್
5. ಶ್ರೀ ಸಂಗಮೇಶ ಬಾದವಾಡಗಿ

### ವಿಶೇಷ ಸೂಚನೆ

1. ಸದಸ್ಯರು ಬರುವಾಗ ತಮ್ಮ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು. ಗುರುತಿನ ಚೀಟಿಯನ್ನು ಪಡೆದಿಲ್ಲದವರು ದಿನಾಂಕ 25–07–2025ರ ಒಳಗೆ ಗುರುತಿನ ಚೀಟಿಯನ್ನು ಕಛೇರಿಯಿಂದ ಪಡೆಯಬಹುದು..
2. ಸದಸ್ಯರು ಕಳುಹಿಸುವ ಸಲಹೆ ಸೂಚನೆಗಳನ್ನು 21–07–2025 ಸಂಜೆ : 5.30 ಗಂಟೆಗೆ ಮುಂಚೆ ಕಛೇರಿಗೆ ತಲುಪಿಸಬೇಕು.
3. ಆಡಳಿತ ವರದಿ ಮತ್ತು ಲೆಕ್ಕ ಪತ್ರಗಳ ಪ್ರತಿಯನ್ನು ಪ್ರತಿಷ್ಠಾನದ ಕಛೇರಿ ಸಮಯದಲ್ಲಿ ಪಡೆಯಬಹುದು.
4. ಕಚೇರಿಗೆ ವಾರದ ರಜಾದಿನ ಭಾನುವಾರ ಆಗಿರುತ್ತದೆ.
5. ಮತದಾನ ಮಾಡಲು ಚುನಾವಣೆ ದಿನಾಂಕ 25.07.2025ಕ್ಕೆ ಕನಿಷ್ಠ ಒಂದು ವರ್ಷ ಪೂರೈಸಿರಬೇಕು.
6. ಸದಸ್ಯರು ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಲು ಕನಿಷ್ಠ 5 ವರ್ಷವಾಗಿರಬೇಕು.
7. 26.07.2024ಕ್ಕೆ ಮುಂಚೆ ಸದಸ್ಯತ್ವ ಪಡೆದವರು ಮಾತ್ರ ಮತದಾನದ ಹಕ್ಕು ಹೊಂದಿರುತ್ತಾರೆ ಹಾಗೂ 26.07.2020ರ ಮುಂಚೆ ಸದಸ್ಯರಾಗಿರುವವರು ಮಾತ್ರ ಚುನಾವಣೆಗೆ ಸ್ಪರ್ಧಿಸಬಹುದು.
8. ಮತದಾನ ಮಾಡುವ ಸದಸ್ಯರು ಚುನಾವಣಾ ಸ್ಪರ್ಧಿಗಳಲ್ಲಿ 5 ಮಂದಿಗೆ ಕಡ್ಡಾಯವಾಗಿ ಮತ ಹಾಕಬೇಕು. 5ಕ್ಕಿಂತ ಕಡಿಮೆ ಅಥವಾ ಹೆಚ್ಚು ಮತ ಚಲಾಯಿಸಿದರೆ ಆ ಮತಪತ್ರ ಅಸಿಂಧುವಾಗುತ್ತದೆ.

**ದಿನಾಂಕ: 30–06–2025** | **ಡಾ. ಶಾಂತರಾಜು**

**ಸೋಮವಾರ** | ಗೌರವ ಕಾರ್ಯದರ್ಶಿ

**ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ**

## ಸ್ವಾಗತ

2024–2025ನೇ ಸಾಲಿನ 45ನೇ ಸರ್ವ ಸದಸ್ಯರ ಸಭೆಗೆ ತಮಗೆಲ್ಲರಿಗೂ ಹೃತ್ಪೂರ್ವಕ ಸ್ವಾಗತ ಬಯಸುತ್ತೇನೆ. ಇಂದಿನ ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಬೈರಮಂಗಲ ರಾಮೇಗೌಡರಿಗೆ ತಮ್ಮೆಲ್ಲರ ಪರವಾಗಿ ಅತ್ಯಂತ ಸಂತೋಷದಿಂದ ಸ್ವಾಗತ ಕೋರುತ್ತೇನೆ.

## ಶ್ರದ್ಧಾಂಜಲಿ

2024–2025ನೇ ಸಾಲಿನಲ್ಲಿ ನಮ್ಮನ್ನು ಅಗಲಿದ ಸಾಹಿತಿಗಳು, ವಿದ್ವಾಂಸರು, ಗಣ್ಯರು ಮತ್ತು ಸದಸ್ಯರಿಗೆ ಶ್ರದ್ಧಾಂಜಲಿಯನ್ನು ಪ್ರತಿಷ್ಠಾನವು ಸಲ್ಲಿಸುತ್ತಿದೆ. ಇವರ ನಿಧನದಿಂದ ನಾಡಿಗೆ ನುಡಿಗೆ ಅಪಾರ ನಷ್ಟವಾಗಿದೆ. ಈ ಕೆಳಕಂಡ ದಿವಂಗತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸೋಣ.

೧. ಡಾ. ಪಿ.ವಿ.ನಾರಾಯಣ ( ಗೌರವಾಧ್ಯಕ್ಷರು)

೨. ಡಾ. ಎಚ್. ಎಸ್. ಗೋಪಾಲರಾವ್ (ಸದಸ್ಯರು)

೩. ಶ್ರೀ ಜಿ.ಎಸ್. ಸಿದ್ಧಲಿಂಗಯ್ಯ (ಸದಸ್ಯರು)

೪. ಡಾ. ಎಚ್. ಎಸ್. ವೆಂಕಟೇಶಮೂರ್ತಿ (ಸಾಹಿತಿಗಳು)

೫. ಶ್ರೀಮತಿ ಕಮಲಮ್ಮ ಮ.ರಾಮಮೂರ್ತಿ

# 44ನೇ ಸರ್ವ ಸದಸ್ಯರ ಸಭೆಯ ನಡಾವಳಿ (2023–2024)

ಬಿ.ಎಂ.ಶ್ರೀ. ಪ್ರತಿಷ್ಠಾನದ 44 ನೇ ಸರ್ವಸದಸ್ಯರ ಸಭೆಯನ್ನು 28–07–2024 ಭಾನುವಾರ ಬೆಳಗ್ಗೆ 10.30 ಗಂಟೆಗೆ ಪ್ರಾರಂಭಿಸಬೇಕಿತ್ತಾದರೂ ಸದಸ್ಯರ ಕನಿಷ್ಠ ಸಂಖ್ಯಾಬಲ (ಕೋರಂ) ಇಲ್ಲದ ಕಾರಣ ಅರ್ಧಗಂಟೆ ಮುಂದೂಡಿ 11.00ಗಂಟೆಗೆ ಪ್ರಾರಂಭಿಸಲಾಯಿತು.

**ವಿಷಯ : 1. ಸ್ವಾಗತ ಮತ್ತು ಅಗಲಿದವರಿಗೆ ಸಂತಾಪ ಸೂಚನೆ.**

ಅಧ್ಯಕ್ಷರ ಸೂಚನೆಯಂತೆ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಸಭೆಗೆ ಆಗಮಿಸಿದ ಸದಸ್ಯರುಗಳನ್ನೂ, ಅಧ್ಯಕ್ಷರನ್ನೂ, ಗೌರವಾಧ್ಯಕ್ಷರನ್ನೂ, ನಿಕಟಪೂರ್ವ ಅಧ್ಯಕ್ಷರನ್ನೂ, ಕೋಶಾಧಿಕಾರಿಗಳನ್ನೂ ಸಭೆಗೆ ಸ್ವಾಗತಿಸಿ, ಸಭೆಯ ಅಧ್ಯಕ್ಷತೆಯನ್ನು ಡಾ.ಬೈರಮಂಗಲ ರಾಮೇಗೌಡ ಅವರು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

**ವಿಷಯ 2. ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ.**

1. 2023–24 ನೇ ಸಾಲಿನಲ್ಲಿ ನಮ್ಮನ್ನು ಅಗಲಿದ ಸಾಹಿತಿಗಳು, ವಿದ್ವಾಂಸರು, ನಾಡಿನ ಗಣ್ಯರು, ಪ್ರತಿಷ್ಠಾನದ ಸದಸ್ಯರು ಹಾಗೂ ಪ್ರತಿಷ್ಠಾನದೊಡನೆ ನಿಕಟ ಸಂಪರ್ಕ ಹೊಂದಿದ್ದ ಶ್ರೀ ಗೋಪಾಲಕೃಷ್ಣ ಬಿ. ಎಸ್., ಡಾ.ನಳಿನಿ ವೆಂಕಟೇಶ್, ಶ್ರೀಮತಿ ಪ್ರಭಾವತಿ ರಾಮಸ್ವಾಮಿ, ಶ್ರೀ ಕೋ.ಲ. ರಂಗನಾಥರಾವ್, ಶ್ರೀ ರಾಧಾಕೃಷ್ಣ, ಡಾ.ಕೆಳದಿ ಗುಂಡಾಜೋಯಿಸ್, ದಯಾನಂದ ತಿಪ್ಪೇರುದ್ರಪ್ಪ, ಡಾ.ಕೆ. ಗೋಕುಲನಾಥ್, ಡಾ. ಜೆ.ಕೆ.ಎಲ್. ರಾಜನ್ ಡಾ. ಗುರುಲಿಂಗ ಕಾಪಸೆ, ಡಾ. ರಾಜೀವ್ ತಾರಾನಾಥ್, ನ. ರತ್ನ, ಶ್ರೀ ರಾಜೇಂದ್ರ ಪ್ರಸಾದ್, ನಾಡೋಜ ಡಾ. ಕಮಲಾ ಹಂಪನಾ ಹಾಗೂ ನಮ್ಮ ಗಮನಕ್ಕೆ ಬಾರದೆ ಇರುವ, ಅಗಲಿದ ಇತರರನ್ನು ಸ್ಮರಿಸುತ್ತಾ, ಸಭೆಯಲ್ಲಿದ್ದ ಎಲ್ಲಾ ಸದಸ್ಯರೂ ಒಂದು ನಿಮಿಷ ಕಾಲ ಎದ್ದು ನಿಂತು ಮೌನ ಆಚರಣೆ ಮಾಡುವುದರ ಮೂಲಕ ಶ್ರದ್ಧಾಂಜಲಿಯನ್ನು ಸಮರ್ಪಿಸಲಾಯಿತು.

**ವಿಷಯ : 3. ತಿಳಿವಳಿಕೆ ಪತ್ರದ ವಾಚನ ಮತ್ತು ದೃಢೀಕರಣ**

ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಸರ್ವಸದಸ್ಯರ ಸಭೆಯ ತಿಳಿವಳಿಕೆ ಪತ್ರವನ್ನು ಓದಿ ದೃಢೀಕರಿಸಿದರು.

**ವಿಷಯ : 4 43ನೇ ಸರ್ವ ಸದಸ್ಯರ ಸಭೆಯ ನಡಾವಳಿ ಮಂಡನೆ.**

ಗೌರವ ಕಾರ್ಯದರ್ಶಿ ಡಾ.ಶಾಂತರಾಜು ಅವರು 43ನೇ ಸರ್ವಸದಸ್ಯರ ಸಭೆಯ ನಡಾವಳಿಯನ್ನು ಮಂಡಿಸಿದರು. ಡಾ. ಎಂ.ಜಿ.ನಾಗರಾಜ್ ಅವರ ಸೂಚನೆ ಮತ್ತು ಶ್ರೀ ಚಂದ್ರಶೇಖರ ನಾದೂರ್ ಅವರ ಅನುಮೋದನೆಯೊಂದಿಗೆ ಸಭೆ ಸರ್ವಾನುಮತದಿಂದ ನಡಾವಳಿಯನ್ನು ಅಂಗೀಕರಿಸಿತು.

**ವಿಷಯ : 5. ವಾರ್ಷಿಕ ವರದಿ ಮಂಡನೆ ಪರಿಶೀಲನೆ ಹಾಗೂ ಅಂಗೀಕರಿಸುವುದು.**

ವಾರ್ಷಿಕ ವರದಿಯನ್ನು ಗೌರವ ಕಾರ್ಯದರ್ಶಿಗಳಾದ ಡಾ.ಶಾಂತರಾಜು ಅವರು ಸಭೆಯಲ್ಲಿ ಮಂಡಿಸಿದರು. ಹಿಂದಿನ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನವಾಗಿದ್ದಂತೆ ಈ 44ನೇ ಸಭೆಯನ್ನು ಜುಲೈ ತಿಂಗಳಿನಲ್ಲಿಯೇ ನಡೆಸುತ್ತಿದ್ದೇವೆ. 2023–24ನೇ ಸಾಲಿನ ವಾರ್ಷಿಕ ವರದಿಯನ್ನು ನಮ್ಮ ವೆಬ್‌ಸೈಟ್‌ನಲ್ಲಿ, ವಾಟ್ಸಾಪ್‌ನಲ್ಲಿ ಕಳುಹಿಸಿರುವುದರೊಂದಿಗೆ ಕೆಲವರು ಪ್ರತಿಷ್ಠಾನದಲ್ಲಿಯೇ ಬಂದು ವರದಿಯನ್ನು ಪಡೆದುಕೊಂಡಿರುವುದರಿಂದ ವರದಿಯನ್ನು ಪೂರ್ಣವಾಗಿ ಓದಬೇಕೆ ಎಂದು ಕಾರ್ಯದರ್ಶಿಗಳು ಕೇಳಿಕೊಂಡಾಗ, ಸಭೆಯು "ನಾವು ಗಮನಿಸಿದ್ದೇವೆ ಮುಖ್ಯಾಂಶಗಳನ್ನು ಹೇಳಿ ಸಾಕು" ಎಂದು ಅಭಿಪ್ರಾಯಪಟ್ಟಿತು. ಅದರಂತೆ ಓದುತ್ತಿದ್ದಾಗ ಹೊಸ ದತ್ತಿಗಳ ವಿಚಾರ ಬಂದಾಗ "ಅದನ್ನು ಪೂರ್ಣವಾಗಿ ಓದಿ ದಾನಿಗಳನ್ನು, ಅಭಿನಂದಿಸೋಣ,"

ಎಂದು ಶ್ರೀ ಡಿ.ನಂ.ವೆಂಕಟರಮಣಯ್ಯ ಅವರು ಹೇಳಿದರು. ಈ ಸಾಲಿನಲ್ಲಿ ಸಂಗ್ರಹವಾದ ದತ್ತಿಗಳ ಮೊತ್ತ ಎಷ್ಟೆಂದು ತಿಳಿದುಕೊಂಡ ಸದಸ್ಯರು ದತ್ತಿದಾನಿಗಳನ್ನು ಅಭಿನಂದಿಸಿದರು. ಶ್ರೀ ಎಂ.ಎಸ್. ರಾಮ್‌ಪ್ರಸಾದ್ ಅವರ ಸೂಚನೆ ಮತ್ತು ಡಾ. ಪ್ರಮೀಳಾ ಮಾಧವ ಅವರ ಅನುಮೋದನೆಯೊಂದಿಗೆ ಸಭೆಯು ಸರ್ವಾನುಮತದಿಂದ ವರದಿಯನ್ನು ಅಂಗೀಕರಿಸಿತು.

**ವಿಷಯ : 6. 2023–24ನೇ ಸಾಲಿನ ಲೆಕ್ಕ ಪರಿಶೋಧಕರು ಪರಿಶೀಲಿಸಿದ ಲೆಕ್ಕಪತ್ರಗಳ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ**

ಆಡಳಿತ ವರ್ಷ 2023–24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಪಟ್ಟಿಗಳನ್ನು ಬದರಿ ಮಧುಸೂದನ್ ಮತ್ತು ಶ್ರೀನಿವಾಸನ್ ಚಾರ್ಟರ್ಡ್ ಅಕೌಂಟೆಂಟ್ಸ್ ಅವರು ದೃಢೀಕರಿಸಿದ್ದು ಆ ವರದಿಗಳನ್ನು ಸಂಸ್ಥೆಯ ಕೋಶಾಧಿಕಾರಿಗಳಾದ ಡಾ. ಬೆಳವಾಡಿ ಕೃ. ಪ್ರಭಾಕರ್ ಅವರು ಮಂಡಿಸಿದರು. ಕೆಲವು ಸದಸ್ಯರು ಶಾಶ್ವತ ನಿಧಿ ಮತ್ತು ಕಾರ್ಪಸ್ ಫಂಡನ್ನು ಬೇರೆ ಬೇರೆ ತೋರಿಸಿದ್ದೀರಿ ಇವುಗಳ ವ್ಯತ್ಯಾಸವೇನು? ಎಂದು ಕೇಳಿ ವಿವರವನ್ನು ಪಡೆದುಕೊಂಡರು. ಅಲ್ಲದೆ ಸದಸ್ಯರಾದ ಡಿ.ನಂ.ವೆಂಕಟರಮಣಯ್ಯ ಅವರು ಪ್ರತಿಷ್ಠಾನದಲ್ಲಿ ಕೆಲಸ ಮಾಡುವ ಸಿಬ್ಬಂದಿ ವರ್ಗದವರಿಗೆ ನಿವೃತ್ತಿಯ ಬಳಿಕ ನೀಡಲು ಯಾವುದಾದರೂ ನಿಧಿಯೊಂದನ್ನು ಸ್ಥಾಪಿಸಿದ್ದೀರಾ? ಎಂದು ಕೇಳಿದರು. ಅದಕ್ಕೆ ಉತ್ತರಿಸುತ್ತಾ ನಮ್ಮ ಪ್ರತಿಷ್ಠಾನವು ಆ ನಿಯಮಾವಳಿಗಳ ಅಡಿಯಲ್ಲಿ ಬರುವುದಿಲ್ಲ, ನಮ್ಮಲ್ಲಿ ಕೇವಲ ಮೂವರೇ ಸಿಬ್ಬಂದಿ ಇರುವುದರಿಂದ ನಾವು ಸಹ ಅವರಿಂದ ಇಎಸ್‌ಐ, ಪಿಎಫ್ ಯಾವುದನ್ನೂ ಸಂಗ್ರಹಿಸುವುದಿಲ್ಲ, ಹಾಗಾಗಿ ನಿವೃತ್ತಿಯ ನಂತರ ನೀಡಲು ಯಾವುದೇ ನಿಧಿ ಇರುವುದಿಲ್ಲ ಎಂದು ವಿವರಿಸಿದರು. ಈ ಎಲ್ಲ ಚರ್ಚೆಗಳ ನಂತರ ಡಾ. ಶ್ಯಾಮಲಾ ರತ್ನಕುಮಾರಿ ಅವರ ಸೂಚನೆ ಮತ್ತು ಶ್ರೀ ರಾಜಾರಾವ್ ಎಚ್.ಆರ್. ಅವರ ಅನುಮೋದನೆಯೊಂದಿಗೆ ಲೆಕ್ಕಪತ್ರ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ : 7. 2024–25ರ ಆಯ–ವ್ಯಯ ಅಂದಾಜು ಪಟ್ಟಿ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ**

2024–25 ನೇ ಸಾಲಿನ ಆಯ–ವ್ಯಯ ಅಂದಾಜು ಪಟ್ಟಿಯನ್ನು ಕೋಶಾಧಿಕಾರಿಗಳಾದ ಡಾ.ಬೆಳವಾಡಿ ಕೃ. ಪ್ರಭಾಕರ ಅವರು ಓದಿ ಸಭೆಯಲ್ಲಿ ಮಂಡಿಸಿದರು. ಪ್ರೊ. ಅಶ್ವತ್ಥನಾರಾಯಣ ಜಿ. ಅವರು ಮೊತ್ತವನ್ನು ನಮೂದಿಸುವಾಗ ಅರ್ಧವಿರಾಮ ಚಿಹ್ನೆಯನ್ನು ಸರಿಯಾಗಿ ಬಳಸಿ, ಇಲ್ಲದಿದ್ದರೆ ಅದು ಗೊಂದಲಕ್ಕೆ ಕಾರಣವಾಗುತ್ತದೆ ಎಂದು ಒಂದು ಮೊತ್ತವನ್ನು ಉಲ್ಲೇಖಿಸಿದರು. ಅದನ್ನು ಸರಿಪಡಿಸಲು ಒಪ್ಪಿಕೊಳ್ಳಲಾಯಿತು. ಶ್ರೀ ಜಿ. ಅಶ್ವತ್ಥನಾರಾಯಣ ಅವರು **"ಸಿಬ್ಬಂದಿ ಕಲ್ಯಾಣನಿಧಿ ಎನ್ನುವುದನ್ನು ಅತಿಥಿ ವೆಚ್ಚ ಎಂದು ನಮೂದಿಸಿ"** ಎಂದು ಸೂಚಿಸಿದಾಗ ಅದಕ್ಕೆ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು **"**ಹೌದು, ಸಿಬ್ಬಂದಿ ಕಲ್ಯಾಣ ವೆಚ್ಚ ಎನ್ನುವುದು ಸರಿಯಿಲ್ಲ, ಅತಿಥಿ ವೆಚ್ಚ ಎನ್ನುವುದು ಸರಿ**"** ಎಂದು ಸಹಮತ ಸೂಚಿಸಿದರು. ಇದೇ ಸಂದರ್ಭದಲ್ಲಿ ಗ್ರಂಥಗಳ ಖರೀದಿ ಎನ್ನುವುದರ ಬದಲಾಗಿ ಆಕರ ಗ್ರಂಥಗಳ ಖರೀದಿ ಎಂದು ಸ್ಪಷ್ಟವಾಗಿ ನಮೂದಿಸಿ ಎಂದರು. ಅದನ್ನು ಸರಿಪಡಿಸುವುದಾಗಿ ಒಪ್ಪಿಕೊಳ್ಳಲಾಯಿತು. ಶ್ರೀ ರಾ.ಕೃ. ಶ್ರೀಧರಮೂರ್ತಿ ಅವರು ಕೋ ಆಪರೇಟಿವ್ ಸೊಸೈಟಿ ಅಥವಾ ಕೋ ಆಪರೇಟಿವ್ ಬ್ಯಾಂಕ್‌ಗಳಲ್ಲಿ ಹಣ ತೊಡಗಿಸಿದರೆ ಬಡ್ಡಿ ಹೆಚ್ಚು ಬರುತ್ತದೆ ಎಂದು ಸಲಹೆ ಕೊಟ್ಟರು. ಅದಕ್ಕೆ ಅನೇಕ ಸದಸ್ಯರು ಸಮ್ಮತಿಸಲಿಲ್ಲ. ಆದ್ದರಿಂದ ಯಥಾಪ್ರಕಾರ ರಾಷ್ಟ್ರೀಕೃತ ಬ್ಯಾಂಕುಗಳಲ್ಲೇ ಹಣವನ್ನು ಶಾಶ್ವತ ನಿಧಿಯಾಗಿ ಹೂಡಲು ಸಭೆಯು ಸಮ್ಮತಿಸಿತು.

ಶ್ರೀ ಅನಂತರಾಮು ಅವರ ಸೂಚನೆ ಮತ್ತು ಶ್ರೀ ಚಂದ್ರಶೇಖರ್ ನಾದೂರು ಅವರ ಅನುಮೋದನೆಯೊಂದಿಗೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ವಿಷಯ : 8. 2024–25ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕ**

2024–25 ನೇ ಸಾಲಿನಲ್ಲಿ ಬದರಿ ಮಧುಸೂದನ್ ಮತ್ತು ಶ್ರೀನಿವಾಸನ್ ಚಾರ್ಟರ್ಡ್ ಅಕೌಂಟೆಂಟ್ಸ್ ಅವರು ಲೆಕ್ಕ ಪರಿಶೋಧನಾ ಕಾರ್ಯವನ್ನು ಮಾಡಿಕೊಟ್ಟಿದ್ದಾರೆ. ಇವರು ಚೊಕ್ಕವಾಗಿ ಮತ್ತು ಸಮಯೋಚಿತವಾಗಿ ಪರಿಶೋಧನಾ ಕಾರ್ಯ ಮಾಡಿಕೊಟ್ಟಿರುವುದರಿಂದ ಅವರನ್ನು ಮುಂದುವರಿಸಬಹುದು ಎಂದು ಕೋಶಾಧಿಕಾರಿಗಳಾದ ಡಾ. ಬೆಳವಾಡಿ ಕೃ. ಪ್ರಭಾಕರ ಅವರು ಸೂಚಿಸಿದರು. ಸಭೆಯು ಸಂಸ್ಥೆಯ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸುತ್ತಿರುವ ಅವರನ್ನೇ ಮುಂದುವರಿಸುವುದು ಸೂಕ್ತವೆಂದು ಸರ್ವಾನುಮತದಿಂದ ಒಪ್ಪಿತು.

**ವಿಷಯ : 9. ಸದಸ್ಯರು ಕಳುಹಿಸಿರುವ ಸೂಚನೆಗಳ ಮಂಡನೆ**

ಸದಸ್ಯರಾದ ಶ್ರೀ ರಾ.ಕೃ. ಶ್ರೀಧರಮೂರ್ತಿ ಅವರು ಪತ್ರ ಬರೆದು, ನಮ್ಮ ಪ್ರತಿಷ್ಠಾನ ಕುರಿತು ಒಂದು ಕಿರುಪುಸ್ತಕವನ್ನು ಹೊರತರಬೇಕು ಎಂದು ತಿಳಿಸಿದ್ದರು. ಅದನ್ನು ಕಾರ್ಯದರ್ಶಿಗಳು ಸಭೆಯ ಮುಂದೆ ಓದಿದರು. ನಂತರ ಚರ್ಚೆಯಲ್ಲಿ ಪಾಲ್ಗೊಂಡು ಇದು ಒಳ್ಳೆಯ ಕೆಲಸ, ಆಗಬೇಕಾದದ್ದು ಎಂದು ಕೆಲವು ಸದಸ್ಯರು ಹೇಳಿದರು. ಆಗ ಅಧ್ಯಕ್ಷರಾದ ಡಾ.ಬೈರಮಂಗಲ ರಾಮೇಗೌಡ ಅವರು "ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯ ವಿದ್ಯಾರ್ಥಿನಿಯೊಬ್ಬರು ನಮ್ಮ ಸಂಸ್ಥೆಯ ಕನ್ನಡ ನಾಡು ನುಡಿ ಸಂಸ್ಕೃತಿ ಸೇವೆಯನ್ನು ಕುರಿತು ಸಂಶೋಧನೆ ನಡೆಸಲು ನೋಂದಣಿ ಮಾಡಿಸಿದ್ದಾರೆ. ಅದೇ ಒಂದು ಗ್ರಂಥವಾಗುತ್ತದೆ" ಎಂದು ತಿಳಿಸಿದರು. ಆದರೂ ಒಂದು ಕಿರುಪುಸ್ತಕಕ್ಕೆ ಅವಶ್ಯಕತೆ ಇದೆ ಎಂದು ಕೆಲವು ಸದಸ್ಯರು ಅಭಿಪ್ರಾಯಪಟ್ಟರು. ಆಗ ಕಾರ್ಯದರ್ಶಿಗಳಾದ ಶಾಂತರಾಜು ಈಗಾಗಲೇ ನಾನು 'ಅಂತರ್ಬುವಿ' ಎಂಬ ಗ್ರಂಥದಲ್ಲಿ 20 ಪುಟಗಳಿಗೂ ಮೀರಿ ಸಂಸ್ಥೆಯ ಬಗೆಗೆ ಲೇಖನ ಬರೆದಿದ್ದೇನೆ ಮತ್ತು ಬ್ರೌಷರ್‌ಗಳೂ ಇವೆ ಎಂದು ಮಾಹಿತಿ ನೀಡಿದರು. ಇನ್ನೂ ಅಗತ್ಯವಿದ್ದರೆ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ, ಪ್ರಕಟಣ ಸಮಿತಿಯ ತೀರ್ಮಾನದಂತೆ ಮುಂದುವರಿಯೋಣ ಎಂದು ತಿಳಿಸಿದರು.

**ವಿಷಯ : 10. ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಚಾರಗಳು**

ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಶತಮಾನೋತ್ಸವ ಕಾರ್ಯಕ್ರಮ ಕುರಿತು ಚರ್ಚಿಸಲಾಯಿತು. ಇದಕ್ಕೆ ಡಾ.ಆರ್.ಲಕ್ಷ್ಮೀನಾರಾಯಣ ಮತ್ತು ಪ್ರೊ. ಜಿ. ಅಶ್ವತ್ಥನಾರಾಯಣ ಅವರನ್ನು ಕಾರ್ಯಕ್ರಮದ ಸ್ವರೂಪ ನಿರ್ಧರಿಸಲು ಕೋರಲಾಗಿದೆ. ಅವರು ಸಿದ್ಧಪಡಿಸಿದ ನಂತರ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ತಿಳಿಸಲಾಯಿತು. ರಂಗಚಟುವಟಿಕೆ ಕಾರ್ಯಾಗಾರ ಮತ್ತು ಪ್ರತಿಷ್ಠಾನದ ಸುವರ್ಣ ವರ್ಷ ಆಚರಣೆ ಕುರಿತು ಚರ್ಚಿಸಲಾಯಿತು. ಸುವರ್ಣೋತ್ಸವ ಇನ್ನೂ ಸಮಯವಿರುವುದರಿಂದ ಅದಕ್ಕೆ ವಿವಿಧ ಸಮಿತಿಗಳನ್ನು ರಚಿಸಿ ಅನೇಕರ ಸಲಹೆ ಸಹಕಾರ ಪಡೆಯಬೇಕಾಗುತ್ತದೆ ಎಂದು ತೀರ್ಮಾನಿಸಲಾಯಿತು.

**ವಿಷಯ : 11. ಈ ಸಾಲಿನಲ್ಲಿ ನಿವೃತ್ತರಾಗಲಿರುವ ಕಾರ್ಯಕಾರಿ ಸಮಿತಿ ಸದಸ್ಯರು 4 ಮಂದಿ ಆಗಿದ್ದು 5 ಸ್ಥಾನಗಳಿಗೆ ಚುನಾವಣೆ**

ಈ ವರ್ಷ ನಿವೃತ್ತಿ ಹೊಂದುತ್ತಿರುವ ನಾಲ್ವರು ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಮತ್ತು ಹೆಚ್ಚುವರಿ ಒಂದು ಸ್ಥಾನ ಸೇರಿ ಒಟ್ಟು ಐದು ಸ್ಥಾನಗಳಿಗೆ 28.07.2024ರಂದು 44ನೇ ವಾರ್ಷಿಕ ಮಹಾಸಭೆಯ ದಿನದಂದೇ ಚುನಾವಣೆಯನ್ನು ನಡೆಸಲು 19.06.2024ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯು ತೀರ್ಮಾನಿಸಿತ್ತು. ಅದರಂತೆ ಚುನಾವಣೆ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಚುನಾವಣಾ ಪ್ರಕಿಯೆಗಳು 05.07.2024ರಂದು

ಪ್ರಾರಂಭಗೊಂಡು, ಕೊನೆಯ ದಿನಾಂಕ 10–07–2024ರ ವರೆಗೆ ಕೇವಲ 6 ನಾಮಪತ್ರಗಳು ಸಲ್ಲಿಕೆಯಾಗಿದ್ದು ಒಂದು ನಾಮಪತ್ರ ಹೊರತುಪಡಿಸಿ ಉಳಿದು 5 ನಾಮಪತ್ರಗಳು ಸಿಂಧುವಾದವು. ನಿಯಮಾನುಸಾರ ದಿನಾಂಕ : 22.07.2024 ರಂದು ಈ ಐದು ಜನರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಾಣಾಧಿಕಾರಿಗಳಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಪ್ರಕಟಣಾ ಫಲಕದಲ್ಲಿ ಪ್ರಕಟಿಸಿದರು. ಸರ್ವಸದಸ್ಯರ ಸಭೆಯ ದಿನ ಅವರ ಹೆಸರುಗಳನ್ನು ಪ್ರಕಟಿಸಿ ಅಭಿನಂದಿಸಲಾಯಿತು.

**ಚುನಾಯಿತರಾದವರು**

| ಕ್ರ.ಸಂ | ಅಭ್ಯರ್ಥಿಗಳ ಹೆಸರು | ಸದಸ್ಯತ್ವ ಸಂಖ್ಯೆ | ಸದಸ್ಯತ್ವ ಪಡೆದ ದಿನಾಂಕ |
|---|---|---|---|
| 1 | ಶ್ರೀ ಎಂ.ಕೃಷ್ಣಮೂರ್ತಿ | ಕೆ–8 | 24–11–2014 |
| 2 | ಡಾ.ಎನ್. ಗೋಪಾಲಕೃಷ್ಣ | ಜಿ–23 | 29–03–2014 |
| 3 | ಶ್ರೀ ಚಂದ್ರಶೇಖರ್ ನಾಡೂರು | ಸಿ–9 | 10–10–2013 |
| 4 | ಶ್ರೀ ಎ.ಎನ್. ಅನಂತಮೂರ್ತಿ | ಎ–8 | 04–09–2014 |
| 5 | ಶ್ರೀ ಡಿ.ನಂ. ವೆಂಕಟರಮಣಯ್ಯ | ವಿ–1 | 30–07–2003 |

ಬಿ.ಎಸ್. ಗುರುಪ್ರಸಾದ್
ಚುನಾವಣಾಧಿಕಾರಿ

**ವಿಷಯ : 12. ಅಧ್ಯಕ್ಷರ ಭಾಷಣ**

ನಾನು ಪ್ರಸ್ತಾಪಿಸಬೇಕಿದ್ದ ಹಲವು ಸಂಗತಿಗಳು ಈಗಾಗಲೆ ಚರ್ಚಿಸಲ್ಪಟ್ಟಿರುವುದರಿಂದ ಮುಖ್ಯವಾದ ಕೆಲವು ಸಂಗತಿಗಳನ್ನು ಮಾತ್ರ ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಬಿ.ಎಂ.ಶ್ರೀ. ಪ್ರತಿಷ್ಠಾನದ ಕಟ್ಟಡವನ್ನು ನಿರ್ಮಿಸಲಾಗಿರುವ ಬಿ.ಬಿ.ಎಂ.ಪಿ. ಗುತ್ತಿಗೆ ನಿವೇಶನದ ನವೀಕರಣ ಕಳೆದ 13 ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ನಮ್ಮಂತೆಯೇ ಈ ರೀತಿಯ ಸಮಸ್ಯೆ ಅನುಭವಿಸುತ್ತಿರುವ ಸಂಘ ಸಂಸ್ಥೆಗಳ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸಿ, ಹತ್ತಾರು ಬಾರಿ ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ, ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳನ್ನು ಭೇಟಿಯಾಗಿ, ಅಂತಿಮವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ನಮ್ಮ ಕಷ್ಟಗಳನ್ನು ನಿವೇದಿಸಿಕೊಂಡಾಗ ಅವರು 15 ವರ್ಷಗಳ ಅವಧಿಗೆ ನವೀಕರಣ ಮುಂದುವರಿಸಿ ಆದೇಶ ಹೊರಡಿಸಿದರು. ಆದೇಶ ಹೊರಬಿದ್ದಾಗಿನಿಂದ ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ, ವಾರ್ಡ್ ಆಫೀಸಿನ ಅಧಿಕಾರಿಗಳನ್ನು ಮೇಲಿಂದ ಮೇಲೆ ಭೇಟಿಯಾಗಿ ಮನವಿ ಸಲ್ಲಿಸಿದರೂ ಏಳೆಂಟು ತಿಂಗಳು ಕಳೆದ ನಂತರವೇ ಗುತ್ತಿಗೆ ನಿವೇಶನ ನೋಂದಣಿ ಗಾಂಧಿಬಜಾರಿನ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನಡೆಯಿತು ಎನ್ನುವ ಸಂತೋಷದ ಸುದ್ದಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಈ ನೋಂದಣಿ 2025 ಜೂನ್ ತಿಂಗಳವರೆಗೆ ಮಾತ್ರ ಗಡುವನ್ನು ಹೊಂದಿದ್ದು ನಂತರದಲ್ಲಿ ಮತ್ತೆ ನಿವೇಶನ ಗುತ್ತಿಗೆ ಮುಂದುವರಿಕೆಗಾಗಿ ಪ್ರಯತ್ನಿಸಬೇಕಾಗಿರುತ್ತದೆ. ಈ ನಡುವೆ ಬಿ.ಬಿ.ಎಂ.ಪಿ. ಆಸ್ತಿಗಳ ನಿರ್ವಹಣೆಯ ಸಂಬಂಧವಾಗಿ ಕರಡು ಮಸೂದೆಯೊಂದನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು ಯಾವುದೇ ನಿವೇಶನವನ್ನು 30 ವರ್ಷ ಮೀರಿ ಗುತ್ತಿಗೆ ನೀಡುವಂತಿಲ್ಲ ಎನ್ನುವ ನಿಯಮ ರೂಪಿಸಲಾಗಿದೆ. ಇದರಿಂದ ನಮ್ಮಂಥ ಸಾಂಸ್ಕೃತಿಕ – ಸಾಹಿತ್ಯಕ ಸಂಸ್ಥೆಗಳಿಗೆ ಎದುರಾಗುವ ಸಮಸ್ಯೆಯೇನು ಎಂದು ತಜ್ಞರೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮಕ್ಕೆ ಮುಂದಾಗಬೇಕಾಗಿದೆ. ಈ ವಿಚಾರದಲ್ಲಿ ಸಭಾಸದರ ಸಲಹೆ, ಸಹಕಾರ ಬೇಕಾಗಿದೆ.

2024ರ ಮಾರ್ಚ್–ಏಪ್ರಿಲ್‌ನಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೆರವು ಕೋರಿ ಅರ್ಜಿ ಸಲ್ಲಿಸಿದ್ದ ಸಂಘಸಂಸ್ಥೆಗಳಿಗೆ ಧನಸಹಾಯ ಮಂಜೂರಾಗಿದ್ದು, ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಅತ್ಯಂತ ಕಡಿಮೆ ಅಂದರೆ ರೂ. 1,00,000 ಧನಸಹಾಯ ಮಂಜೂರಾದುದರ ಬಗೆಗೆ ಬೇಸರ ವ್ಯಕ್ತಪಡಿಸಿ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಿಗೆ ಮತ್ತು ನಿರ್ದೇಶಕರಿಗೆ ದೀರ್ಘ ಪತ್ರ ಬರೆದು, ಧನಸಹಾಯ ಮಂಜೂರು ಮಾಡಲು ಇಲಾಖೆಯ ಅಧಿಕಾರಿಗಳ ಮಟ್ಟದಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದು, ಅವರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯ ಮಾಡಲಾಗಿತ್ತು. ಆ ಬಗ್ಗೆ ನಿರ್ದೇಶಕರು ಸಂಬಂಧಿಸಿದ ಅಧಿಕಾರಿಯ ಮೇಲೆ ಇಲಾಖಾ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿ ನನ್ನಿಂದ ಲಿಖಿತ ರೂಪದ ಹೇಳಿಕೆ ಪಡೆದುಕೊಂಡಿರುತ್ತಾರೆ. ಧಸಹಾಯ ಮಂಜೂರು ಮಾಡುವ ಅಧಿಕಾರ ಹೊಂದಿರುವ ಅಧಿಕಾರಿಗಳೇ ಲಂಚಕ್ಕಾಗಿ ಕೈಯೊಡ್ಡಿದರೆ, ಅವರಿಗೆ ಲಂಚ ಕೊಡದಿದ್ದರೆ ಒಂದಲ್ಲ ಒಂದು ಲೋಪದೋಷಗಳನ್ನು ಸೃಷ್ಟಿಸಿ ನಮಗೆ ಕೊಡಬೇಕಾದ ಹಣಕ್ಕಾಗಿ ಕತ್ತರಿ ಹಾಕುತ್ತಾರೆ. ಇಂಥವರನ್ನು ಆಯಕಟ್ಟಿನ ಜಾಗದಿಂದ ಎತ್ತಂಗಡಿ ಮಾಡಿದರೆ ಮಾತ್ರ ನಮ್ಮಂಥ ಸಂಸ್ಥೆಗಳು ನಿರಾಳವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗಲು ಸಾಧ್ಯ. ಇದೆಲ್ಲ ನಿಮಗೆ ತಿಳಿದಿರಲೆಂದು ಈ ವಿಚಾರವನ್ನು ಸಭೆಯೆದುರು ಹಂಚಿಕೊಳ್ಳುತ್ತಿದ್ದೇನೆ.

ಈ ನಡುವೆ ಹತ್ತಾರು ಒಳ್ಳೆಯ ಕೆಲಸಗಳು, ಹೆಮ್ಮೆಪಡುವಂಥ ಕೆಲಸಗಳು ಪ್ರತಿಷ್ಠಾನದಲ್ಲಿ ನಡೆದಿವೆ. ಪ್ರತಿಷ್ಠಾನದ ಸಂಸ್ಥಾಪಕರಾದ ಪ್ರೊ. ಎಂ.ವಿ.ಸೀತಾರಾಮಯ್ಯ ಅವರ ಆಶಯದಂತೆ ಇಲ್ಲಿನ ಸಂಶೋಧನಾ ಚಟುವಟಿಕೆಗಳು ವಿಸ್ತರಣೆಗೊಳ್ಳುತ್ತಿವೆ. ಆರೇಳು ವರ್ಷಗಳಿಂದ ನಿಧಾನ ಗತಿಯಲ್ಲಿ ಪಿಎಚ್.ಡಿ. ಅಧ್ಯಯನ ನಡೆಸುತ್ತಿದ್ದವರನ್ನು ಚುರುಕುಗೊಳಿಸಿ, ಅವರ ಸಮಸ್ಯೆಗಳನ್ನು ಪರಿಹರಿಸಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿ ಪಡೆದುಕೊಳ್ಳುವಂತೆ ಮಾಡಲಾಗಿದೆ. ನಮ್ಮ ಮಾನ್ಯತಾ ಕೇಂದ್ರ ಅತ್ಯುತ್ತಮವಾಗಿ ಕೆಲಸ ಮಾಡುತ್ತಿರುವುದನ್ನು ಗಮನಿಸಿ ಒಂದೇ ಬಾರಿಗೆ ಹೊಸದಾಗಿ 15 ವಿದ್ಯಾರ್ಥಿಗಳು ನೋಂದಣಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದು, ಸದ್ಯದಲ್ಲೇ ಅವರು ಖಾಯಂ ನೋಂದಣಿಯ ಕಲೋಕ್ವಿಯಂನಲ್ಲಿ ಭಾಗವಹಿಸಲಿದ್ದಾರೆ. ಅವರಿಗೆ ಅಧ್ಯಯನ, ಸಂಶೋಧನೆಗೆ ಹೆಚ್ಚಿನ ಅನುಕೂಲ ಕಲ್ಪಿಸುವುದಕ್ಕಾಗಿ ಈವರೆಗೆ ಕರ್ನಾಟಕ ಇತಿಹಾಸ ಅಕಾಡೆಮಿ ಕಾರ್ಯ ನಿರ್ವಹಿಸುತ್ತಿದ್ದ ಅಂಕಣವನ್ನು ತೆರವುಗೊಳಿಸಿ, ಅಲ್ಲಿ ಪ್ರತಿಷ್ಠಾನದ ಗ್ರಂಥಭಂಡಾರದ ಪುಸ್ತಕಗಳನ್ನು ಪರಾಮರ್ಶೆಗಾಗಿಯೂ ಟಿಪ್ಪಣಿ ಮಾಡಿಕೊಳ್ಳುವುದಕ್ಕಾಗಿಯೂ ಸಜ್ಜುಗೊಳಿಸಲಾಗುವುದು. ಇತಿಹಾಸ ಅಕಾಡೆಮಿ ಕಛೇರಿ ಕಾರ್ಯ ನಿರ್ವಹಿಸಲು ಎರಡನೇ ಮಹಡಿಯಲ್ಲಿರುವ ಕೊಠಡಿಯನ್ನು ಬಿಟ್ಟುಕೊಡಲಾಗಿದೆ.

ಪ್ರತಿಷ್ಠಾನದ ಹಸ್ತಪ್ರತಿ ವಿಭಾಗಕ್ಕೆ ಇತ್ತೀಚಿನ ದಿನಗಳಲ್ಲಿ ಅತ್ಯಂತ ಅಪರೂಪದ ಹಸ್ತಪ್ರತಿಗಳು ಓದಿಗಾಗಿ, ಶುದ್ಧೀಕರಣಕ್ಕಾಗಿ ಬರುತ್ತಿವೆ. ಹೆಸರಾಂತ ಸಂಸ್ಥೆಗಳು ಲಿಪ್ಯಂತರ, ಭಾಷಾಂತರ ಕೆಲಸಕ್ಕಾಗಿ ಹಸ್ತಪ್ರತಿ ವಿಭಾಗದ ನೆರವು ಪಡೆಯುತ್ತಿದ್ದಾರೆ. ಬೆಂಗಳೂರಿನ ವಿವಿಧ ಭಾಗಗಳಲ್ಲಿರುವ ಹತ್ತಕ್ಕೂ ಹೆಚ್ಚಿನ ಪದವಿ ಕಾಲೇಜು ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಅಧ್ಯಯನಕ್ಕಾಗಿ ಪ್ರತಿಷ್ಠಾನದ ಗ್ರಂಥಭಂಡಾರ ಹಾಗೂ ಹಸ್ತಪ್ರತಿ ವಿಭಾಗಕ್ಕೆ ಅಧ್ಯಾಪಕರೊಂದಿಗೆ ಭೇಟಿ ನೀಡಿ, ಅಧ್ಯಯನ ನಡೆಸಿ ಒಂದು ದಿನದ ಮತ್ತು ಹದಿನೈದು ದಿನಗಳ ತರಬೇತಿ ಪಡೆದು ಪ್ರಬಂಧಗಳನ್ನು ಸಿದ್ಧಪಡಿಸುವ ಜ್ಞಾನವನ್ನು ಪಡೆದುಕೊಂಡಿರುತ್ತಾರೆ.

ಇತ್ತೀಚೆಗೆ ಪ್ರತಿಷ್ಠಾನದ ಮಾಸಿಕ ವಾರ್ತಾಪತ್ರ 'ಹೊಂಗನಸು' ಹೊಸ ವಿನ್ಯಾಸದಲ್ಲಿ ಅಂದವಾಗಿ ಮುದ್ರಣವಾಗಿ ಸದಸ್ಯ ಓದುಗರ ಮೆಚ್ಚುಗೆಗೆ ಪಾತ್ರವಾಗಿತ್ತು. ಆದರೆ ಈ ಹಿಂದೆ ದೆಹಲಿಯಲ್ಲಿರುವ ಕಚೇರಿಗೆ ಪತ್ರಿಕೆಗೆ ಸಂಬಂಧಿಸಿದ ವಾರ್ಷಿಕ ವರದಿ ಸಲ್ಲಿಸದಿರುವ ಲೋಪದಿಂದಾಗಿ ರೂ. 7,000/– ದಂಡ ವಸೂಲಿ ಮಾಡಿದ್ದಲ್ಲದೆ ಮರು ನೋಂದಣಿಗೆ ಅರ್ಜಿ ಸಲ್ಲಿಸಬೇಕೆಂದೂ ಅಲ್ಲಿಯವರೆಗೆ ಅಂಚೆ ರಿಯಾಯ್ತಿ ದೊರೆಯದೆ ನಾಲ್ಕು ರೂಪಾಯಿಯ ಸ್ಟಾಂಪ್ ಹಚ್ಚಬೇಕೆಂದೂ ತಿಳಿಸಿರುವುದರಿಂದ ಪರಿಸ್ಥಿತಿ ಸರಿಹೋಗುವವರೆಗೆ ಹೊಂಗನಸನ್ನು ಆನ್‌ಲೈನ್‌ನಲ್ಲಿ ಮಾತ್ರ ಪ್ರಕಟಿಸುವುದು ಅನಿವಾರ್ಯವಾಗಿರುತ್ತದೆ.

ಪ್ರತಿಷ್ಠಾನದ ಮುಂಬದಿಯ ಅಂಗಳವನ್ನು ಕಾರ್ಯಕ್ರಮಗಳು ನಡೆಯುವಾಗ ಕಾಫೀ, ಉಪಾಹಾರ, ಊಟ ಇತ್ಯಾದಿ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿತ್ತು. ಆದರೆ ಪ್ರಖರ ಬಿಸಿಲು, ಮಳೆ ಸುರಿಯುವ ಸಂದರ್ಭದಲ್ಲಿ ಅದನ್ನು ಅನಿವಾರ್ಯವಾಗಿ ಒಳಗಿನ ಅಂಗಳದಲ್ಲಿ ನಡೆಸಬೇಕಾಗುತ್ತಿತ್ತು. ಇದರಿಂದ ವೇದಿಕೆಯು ಕಾರ್ಯಕ್ರಮಕ್ಕೆ ಅಡಚಣೆಯಾಗುತ್ತಿತ್ತು. ಕಾರ್ಯಕ್ರಮ ಆಲೋಚಿಸುತ್ತಿದ್ದವರು ಈ ತೊಂದರೆ ತಪ್ಪಿಸುವಂತೆ ಮನವಿ ಮಾಡಿಕೊಳ್ಳುತ್ತಿದ್ದರು. ಅದಕ್ಕೆ ವಿಶೇಷ ಆದ್ಯತೆ ನೀಡಿ, ದಾನಿಗಳ ನೆರವನ್ನು ಪಡೆದು ಬಿಸಿಲಿನಿಂದ ಮತ್ತು ಮಳೆಯಿಂದ ರಕ್ಷಣೆ ನೀಡುವ ಮೇಲ್ಚಾವಣಿಯನ್ನು ಕಟ್ಟಡದ ಸೌಂದರ್ಯ ಮತ್ತು ವಿನ್ಯಾಸಕ್ಕೆ ಧಕ್ಕೆಯಾಗದಂತೆ ಎರಡೂವರೆ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ದತ್ತಿ ಉಪನ್ಯಾಸ, ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳನ್ನು ಹೆಚ್ಚು ಜನ ಭಾಗವಹಿಸುವಂತೆ, ಆಸಕ್ತಿಯಿಂದ ಆಲಿಸುವಂತೆ ವೈವಿಧ್ಯಮಯವಾಗಿ ರೂಪಿಸಿ ನಡೆಸಲಾಗುತ್ತಿದೆ. ಈ ಬಾರಿ ದಾಖಲೆ ಮೊತ್ತದ ದತ್ತಿ ನಿಧಿಗಳನ್ನು ಸಂಗ್ರಹಿಸಲಾಗಿದೆ. ದತ್ತಿ ಇಟ್ಟವರ ಬಂಧು ಬಳಗದವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಲಾಗುತ್ತಿದೆ.

ಸರ್ಕಾರದ ಧನಸಹಾಯ ನೆಚ್ಚಿಕೊಂಡು ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗಿರುವುದರಿಂದ, ಹೆಚ್ಚು ಹಣ ಖರ್ಚು ಮಾಡುವಷ್ಟು ಸ್ವಾವಲಂಬನೆಯ ಶಕ್ತಿ ಇಲ್ಲದಿರುವುದರಿಂದ ಪ್ರತಿಷ್ಠಾನದ ಸದಸ್ಯರು ಉದಾರವಾಗಿ ಹಣ ಸಹಾಯ ಮಾಡಬೇಕೆಂದೂ ದಾನಿಗಳ ಮನವೊಲಿಸಿ ಅವರಿಂದ ದೇಣಿಗೆ ಕೊಡಿಸಬೇಕೆಂದೂ ಮನವಿ ಮಾಡಿಕೊಳ್ಳಲಾಗುತ್ತಿದೆಯಾದರೂ ಅದಕ್ಕೆ ಸೂಕ್ತ ಸ್ಪಂದನೆ ಸಿಗುತ್ತಿಲ್ಲ. ಇನ್ನಾದರೂ ನಮ್ಮ ಕಾರ್ಯಕಾರಿ ಸಮಿತಿ ಸದಸ್ಯರನ್ನೂ ಒಳಗೊಂಡಂತೆ ಉಳಿದೆಲ್ಲ ಸದಸ್ಯರೂ ಈ ವಿಚಾರವಾಗಿ ಗಂಭೀರವಾಗಿ ಆಲೋಚನೆ ಮಾಡಿ ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ದೇಣಿಗೆ ನೀಡಬೇಕೆಂದೂ, ಬೇರೆಯವರಿಂದ ದೇಣಿಗೆ ಕೊಡಿಸಬೇಕೆಂದೂ ಮನವಿ ಮಾಡಿಕೊಳ್ಳುತ್ತೇನೆ.

ವಿಚಾರ ಸಂಕಿರಣ, ವಿಚಾರಗೋಷ್ಠಿ, ಸಾಹಿತಿಗಳ ಶತಮಾನೋತ್ಸವ ಆಚರಣೆ, ವಿಶ್ವ ಪುಸ್ತಕ ದಿನಾಚರಣೆ ಮುಂತಾದವುಗಳನ್ನು ಸ್ವತಂತ್ರವಾಗಿ ನಡೆಸುವಷ್ಟು ಚೈತನ್ಯ ಪ್ರತಿಷ್ಠಾನಕ್ಕೆ ಇಲ್ಲದಿರುವುದರಿಂದ ಕೆಲವು ಸಮಾನ ಆಲೋಚನೆಯ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ನಡೆಸಲಾಗುತ್ತಿದೆ. ಈ ವರ್ಷದಲ್ಲಿ ಕರ್ನಾಟಕ ಕೈಗಾರಿಕಾ ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಲೇಖಿಕಾ ಸಾಹಿತ್ಯ ವೇದಿಕೆ, ಕರ್ನಾಟಕ ಪ್ರಕಾಶಕರ ಸಂಘ ಈ ಸಂಸ್ಥೆಗಳೊಂದಿಗೆ ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಯಾಗಿ ನಡೆಸಲಾಗಿದೆ.

ನಿಮ್ಮೆಲ್ಲರ ಸಹಕಾರಕ್ಕೆ ಧನ್ಯವಾದಗಳು

( ಡಾ. ಬೈರಮಂಗಲ ರಾಮೇಗೌಡ)
ಅಧ್ಯಕ್ಷರು

# ೪೫ನೇ ಸರ್ವಸದಸ್ಯರ ಸಭೆ

## ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ಷಿಕ ವರದಿ ೨೦೨೪-೨೫

### ವಾರ್ಷಿಕ ವರದಿ ಮಂಡನೆ

**೨೭ ಜುಲೈ ೨೦೨೫ರಂದು ಬಿ.ಎಂ.ಶ್ರೀ. ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣದಲ್ಲಿ ನಡೆಯುವ ೪೫ನೇ ಸರ್ವ ಸದಸ್ಯರ ಸಭೆಯಲ್ಲಿ ಕಾರ್ಯಕಾರಿ ಸಮಿತಿಯು ಮಂಡಿಸುತ್ತಿರುವ ೧-೦೪-೨೦೨೪ ರಿಂದ ೩೧-೦೩-೨೦೨೫ ರ ವರೆಗಿನ ಕಾರ್ಯಕಲಾಪಗಳ ವರದಿ.**

**ಸನ್ಮಾನ್ಯ ಸದಸ್ಯರೇ,**

ಮಾನ್ಯ ಸದಸ್ಯರ ಸಹಾಯ ಸಹಕಾರದಿಂದ ಬಿ.ಎಂ.ಶ್ರೀ. ಪ್ರತಿಷ್ಠಾನವು ೪೪ ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿರುತ್ತದೆ. ಡಾ.ಪಿ.ವಿ.ನಾರಾಯಣ ಮತ್ತು ಡಾ. ಬೈರಮಂಗಲ ರಾಮೇಗೌಡ ಅವರ ಮಾರ್ಗದರ್ಶನ ಹಾಗೂ ಸದಸ್ಯರ ಮತ್ತು ಪದಾಧಿಕಾರಿಗಳ ನಿರಂತರ ತೊಡಗಿಸಿಕೊಳ್ಳುವಿಕೆಯಿಂದ ಪ್ರತಿಷ್ಠಾನವು ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

### ೨೦೨೪-೨೫ನೇ ಸಾಲಿನಲ್ಲಿ ಪ್ರತಿಷ್ಠಾನವು ನಡೆಸಿದ ಕಾರ್ಯಕ್ರಮಗಳ ವಿವರ

| **ಕ್ರ.ಸಂ** | **ಕಾರ್ಯಕ್ರಮಗಳು** | **ಸಂಖ್ಯೆ** |
|---|---|---|
| ೧ | ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳು | ೧೦ |
| ೨ | ದತ್ತಿನಿಧಿ ಉಪನ್ಯಾಸ ಕಾರ್ಯಕ್ರಮಗಳು/ಸ್ಪರ್ಧೆ+ ಭಕ್ತಿಗೀತೆ ಗಾಯನ | ೩೫ |
| ೩ | ಹಳಗನ್ನಡ ಕಲಿಕಾ ಶಿಬಿರದ ಉದ್ಘಾಟನೆ ಮತ್ತು ಪ್ರಮಾಣ ಪತ್ರ ವಿತರಣೆ | ೩ |
| ೪ | ಸಹಯೋಗ ಕಾರ್ಯಕ್ರಮ | ೬ |
| | **ಒಟ್ಟು ಕಾರ್ಯಕ್ರಮಗಳು** | **೫೪** |

ಈ ವರ್ಷ ೫೪ ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ. ಈ ವರ್ಷದಲ್ಲಿ ಕಾರ್ಯಕ್ರಮಗಳು ವೈವಿಧ್ಯಮಯವಾಗಿದ್ದವು. ಈ ಕಾರ್ಯಕ್ರಮಗಳು ಮುಖಪುಸ್ತಕದ ದೂರವೀಕ್ಷಣೆಯಲ್ಲಿ (ಲೈವ್‌ನಲ್ಲಿ) ಮತ್ತು ಭೌತಿಕವಾಗಿಯೂ ನಡೆದಿವೆ.

### ಹೊಸ ದತ್ತಿ ಸೇರ್ಪಡೆ

| **ಕ್ರ.ಸಂ.** | **ದತ್ತಿ ನಿಧಿ ಹೆಸರು** | **ದಾನಿಗಳು** | **ದಿನಾಂಕ** | **ಮೊತ್ತ** |
|---|---|---|---|---|
| 1 | ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 12-08-2024 | 1,00,000 |
| 2 | ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 12-08-2024 | 1,00,000 |
| 3 | ಶ್ರೀ ಡಿ.ವಿ.ಗುಂಡಪ್ಪ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 12-08-2024 | 1,00,000 |
| 4 | ಗ್ರಂಥಾಲಯ ಪಿತಾಮಹ ಡಾ.ಎಸ್. ಆರ್. ರಂಗನಾಥನ್ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 12-08-2024 | 1,00,000 |
| 5 | ಶ್ರೀ ಕೃಷ್ಣಮೂರ್ತಿ ಪುರಾಣಿಕ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 19-08-2024 | 1,00,000 |
| 6 | ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 19-08-2024 | 1,00,000 |

| ಕ್ರ.ಸಂ. | ದತ್ತಿ ನಿಧಿ ಹೆಸರು | ದಾನಿಗಳು | ದಿನಾಂಕ | ಮೊತ್ತ |
|---|---|---|---|---|
| 7 | ರಾಷ್ಟ್ರಕವಿ ಶ್ರೀ ಮಂಜೇಶ್ವರ ಗೋವಿಂದ ಪೈ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 19-08-2024 | 1,00,000 |
| 8 | ರೆವರೆಂಡ್ ಶ್ರೀ ಚೆನ್ನಪ್ಪ ದಾನಿ ಎಲ್ಲಪ್ಪ ಉತ್ತಂಗಿ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 19-08-2024 | 1,00,000 |
| 9 | ಅಮೋಘವರ್ಷ ನೃಪತುಂಗ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 11-09-2024 | 1,00,000 |
| 10 | ಅದ್ಭುತ ಗಾಯಕ ಕವಿ, ಸಮಸಮಾಜ ಪ್ರತಿಪಾದಕ ಶ್ರೀ ಗುಮ್ಮಡಿ ವಿಠಲದಾಸ ಗದ್ದಾರ್ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 11-09-2024 | 1,00,000 |
| 11 | ಶ್ರೀಮತಿ ವಿಶಾಲಾಕ್ಷಮ್ಮ – ಶ್ರೀ ಬಿ.ಎಸ್. ಶಾಮಣ್ಣ (ರಾಮಭದ್ರ ಶಾಸ್ತ್ರೀ) ಸ್ಮರಣಾರ್ಥ ದತ್ತಿ ಉಪನ್ಯಾಸ | ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ | 27-01-2025 | 1,00,000 |
| 12 | ಶ್ರೀ ಕೆ.ವಿ.ಶಂಕರೇಗೌಡ , ಡಾ.ಜಿ.ಎಚ್. ನಾಯಕರ ದತ್ತಿ | ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ | 29-01-2025 | 5,00,000 |
| | | | **ಒಟ್ಟು** | **16,00,000** |

**ದತ್ತಿಗಳನ್ನು ಸ್ಥಾಪಿಸಿರುವ ಕೊಡುಗೈ ದಾನಿಗಳಾದ ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಮತ್ತು ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅವರಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನವು ಆಭಾರಿಯಾಗಿದೆ.**

**ಕಾರ್ಯಕಾರಿ ಸಮಿತಿ ಸಭೆಗಳು**

ಬಿ.ಎಂ.ಶ್ರೀ. ಪ್ರತಿಷ್ಠಾನದ ಉಪನಿಯಮಗಳ ಪ್ರಕಾರ ಪ್ರತಿವರ್ಷದಲ್ಲಿ ಮೂರು ತಿಂಗಳಿಗೆ ಒಮ್ಮೆ ಒಟ್ಟು ನಾಲ್ಕು ಕಾರ್ಯಕಾರಿ ಸಮಿತಿ ಸಭೆಗಳನ್ನು ನಡೆಸಬೇಕಾಗಿರುತ್ತದೆ. ಅಂತೆಯೇ ೧೯-೦೬-೨೦೨೪, ೨೫-೦೯-೨೦೨೪, ೧೮-೦೧-೨೦೨೫, ೨೧-೦೪-೨೦೨೫ ದಿನಾಂಕಗಳಂದು ಕಾರ್ಯಕಾರಿ ಸಮಿತಿ ಸಭೆಗಳನ್ನು ನಡೆಸಲಾಗಿದೆ ಹಾಗೂ ಈ ಸಭೆಗಳಲ್ಲಿ ಹಲವಾರು ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

**ಪ್ರತಿಷ್ಠಾನದ ಸದಸ್ಯರ ವಿವರ :-**

| | |
|---|---|
| ಆಜೀವ ಸದಸ್ಯರು (೦೧-೦೪-೨೦೨೪ರಂದು ಇದ್ದಂತೆ) | ೭೭೧ |
| ಹೊಸ ಸದಸ್ಯರ ಸೇರ್ಪಡೆ (೩೧-೦೩-೨೦೨೫ರ ವರೆಗೆ) | + ೨೦ |
| | ೭೯೧ |
| **ನಿಧನರಾದವರ ಸಂಖ್ಯೆ** | – ೩ |
| **ಒಟ್ಟು ಹಾಲಿ ಸದಸ್ಯರ ಸಂಖ್ಯೆ** | **೭೮೮** |

**ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದಿಂದ ಪಿಎಚ್. ಡಿ. ಪದವಿ ವಿವರಗಳು**

೨೦೦೩ ರಿಂದ ಪ್ರತಿಷ್ಠಾನವು ಕನ್ನಡ ವಿಶ್ವವಿದ್ಯಾಲಯ ಸ್ನಾತಕೋತ್ತರ **'ಸಂಶೋಧನಾ ಕೇಂದ್ರ'** ಎಂದು ಮಾನ್ಯತೆ ಪಡೆದಿದ್ದು, ಈ ಕೇಂದ್ರದ ಮೂಲಕ ಪ್ರತಿಷ್ಠಾನವು ಪಿಎಚ್. ಡಿ. ಪದವಿಗಳಿಗೆ ವಿಶ್ವವಿದ್ಯಾಲಯ ಅನುಮೋದಿಸಿರುವ ಹತ್ತು ಜನ ನುರಿತ ವಿದ್ವಾಂಸರಿಂದ ಮಾರ್ಗದರ್ಶನ ಒದಗಿಸುತ್ತಿದೆ. ಇದುವರೆಗೆ ೨೫ ವಿದ್ಯಾರ್ಥಿಗಳು ಪಿಎಚ್.ಡಿ.

ಪಡೆದಿದ್ದಾರೆ ಹಾಗೂ ೧೧೬ ವಿದ್ಯಾರ್ಥಿಗಳು ಎಂ.ಫಿಲ್.ಪದವಿಯನ್ನು ಪಡೆದಿರುತ್ತಾರೆ. ಈಗ 2024–25ನೇ ಸಾಲಿನಲ್ಲಿ ೧೫ ಜನ ವಿದ್ಯಾರ್ಥಿಗಳು ಪಿಎಚ್.ಡಿ. ಅಭ್ಯರ್ಥಿಗಳಾಗಿದ್ದಾರೆ. 15 ಜನ ಖಾಯಂ ನೋಂದಣಿ ಪಡೆದು ಸಂಶೋಧನೆಯನ್ನು ಮುಂದುವರಿಸುತ್ತಿದ್ದಾರೆ. ಸಂಶೋಧನೆ ಮುಂದುವರಿಸಲು ಡಾ. ಮುತ್ತೇಗೌಡ ಟಿ.ಎನ್., ಡಾ.ಎಂ.ಎಸ್. ವಿದ್ಯಾ, ಡಾ. ಪುಷ್ಪಭಾರತಿ ಆರ್. ಎ. ಮತ್ತು ಡಾ. ವೆಂಕಟೇಶಯ್ಯ ಕೆ.ಎಂ. ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಪದವಿ ಪಡೆಯಲು ಮಾರ್ಗದರ್ಶನ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಪಿಎಚ್.ಡಿ. ಪದವಿ ಪಡೆಯಲು ಶ್ರದ್ಧೆಯಿಂದ ಅಧ್ಯಯನ ನಡೆಸುತ್ತಿದ್ದಾರೆ. ೨೦೦೯ ರಿಂದ ೨೦೨೧ರವರೆಗೆ ಡಾ.ವಿಜಯಾ ಸುಬ್ಬರಾಜ್ ಅವರು ಸಂಯೋಜನಾಧಿಕಾರಿಯಾಗಿ ಜವಾಬ್ದಾರಿ ವಹಿಸಿಕೊಂಡು, ಸಂಶೋಧನಾ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ಆನಂತರ ೩೧–೧೨–೨೦೨೪ರವರೆಗೆ ಡಾ. ಚಿತ್ತಯ್ಯ ಪೂಜಾರ್ ಅವರು ಈ ಶೈಕ್ಷಣಿಕ ಕಾರ್ಯಕ್ರಮದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಪ್ರಸ್ತುತ ಡಾ. ಶಾಂತರಾಜು ಅವರು ಸಂಯೋಜನಾಧಿಕಾರಿ ೧–೧–೨೦೨೫ ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

೨೦೧೭–೧೮ನೇ ಸಾಲಿನ ಪಿಎಚ್.ಡಿ. ವಿದ್ಯಾರ್ಥಿಗಳು ಸಂಶೋಧನೆ ಮುಂದುವರಿಸುತ್ತಿದ್ದಾರೆ.

| ಕ್ರ.ಸಂ | ಪಿಎಚ್.ಡಿ. ಪ್ರಬಂಧದ ವಿಷಯ | ವಿದ್ಯಾರ್ಥಿಯ ಹೆಸರು | ಮಾರ್ಗದರ್ಶಕರು |
|---|---|---|---|
| ೧ | ಕನ್ನಡ ನವೋದಯ ಕಾದಂಬರಿಗಳು: ಭಾಷಿಕ ಅಧ್ಯಯನ | ರಾಘವೇಂದ್ರ ಜಿ. | ಡಾ. ಮುತ್ತೇಗೌಡ ಟಿ.ಎನ್. |
| ೨ | ಗ್ರಾಮದೇವತೆಗಳ ಅಧ್ಯಯನದ ತಾತ್ವಿಕ ನೆಲೆಗಳು | ಸಿದ್ದಪ್ಪ ಜಿ.ಪಿ. | ಡಾ. ಶಾಂಭವಿ ಎಸ್. |

.

## ಖಾಯಂ ನೋಂದಣಿ ಪಡೆದುಕೊಂಡಿರುವ ಸಂಶೋಧನಾರ್ಥಿಗಳ ವಿವರ

| ಕ್ರ.ಸಂ | ಪಿಎಚ್.ಡಿ. ಪ್ರಬಂಧದ ವಿಷಯ | ವಿದ್ಯಾರ್ಥಿಯ ಹೆಸರು | ಮಾರ್ಗದರ್ಶಕರು |
|---|---|---|---|
| ೧ | 'ಕನ್ನಡ ಕಥನ ಸಾಹಿತ್ಯದಲ್ಲಿ ಬಾಲ್ಯ ಜೀವನದ ಚಿತ್ರಣ' | ಶಿವಕುಮಾರ ಎ.ಎಸ್. | ಡಾ. ವೆಂಕಟೇಶಯ್ಯ ಕೆ.ಎಂ. |
| ೨ | 'ಲೈಂಗಿಕ ಅಲ್ಪಸಂಖ್ಯಾತರ ಕನ್ನಡ ಆತ್ಮಕಥೆಗಳ ಅಧ್ಯಯನ' (ಮಂಜಮ್ಮ ಜೋಗತಿ, ಅಕ್ಕೈ ಪದ್ಮಶಾಲಿ, ವಿದ್ಯಾ, ರೇವತಿಯವರನ್ನು ಅನುಲಕ್ಷಿಸಿ) | ಗೀತಾ ಆರ್. | ಡಾ. ವೆಂಕಟೇಶಯ್ಯ ಕೆ.ಎಂ. |
| ೩ | 'ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಮಹಿಳಾ ಬದುಕಿನ ವಿವಿಧ ಆಯಾಮಗಳು' | ಪಾಟೀಲ ಶೋಭಾ | ಡಾ.ಪುಷ್ಪ ಭಾರತಿ ಆರ್. ಎ. |
| ೪ | 'ಸಮಗ್ರ ಲಲಿತ ಪ್ರಬಂಧಗಳ ಸಾಂಸ್ಕೃತಿಕ ಅಧ್ಯಯನ' (ಎ.ಎನ್.ಮೂರ್ತಿರಾವ್ ಮತ್ತು ವೀರೇಂದ್ರ ಸಿಂಪಿ) | ಭಾಗ್ಯಮ್ಮ ಎಚ್.ಎನ್. | ಡಾ.ಪುಷ್ಪ ಭಾರತಿ ಆರ್.ಎ. |
| ೫ | 'ನವೋದಯ ಕಥಾ ಸಾಹಿತ್ಯದಲ್ಲಿ ಜೀವನ ಮೌಲ್ಯಗಳ ತಾತ್ವಿಕ ಸ್ವರೂಪ' | ಲೋಕೇಶ ಎಂ. | ಡಾ.ಪುಷ್ಪ ಭಾರತಿ ಆರ್. ಎ. |
| ೬ | 'ಆಧುನಿಕ ವಚನಗಳ ಆಶಯ ಮತ್ತು ಅಭಿವ್ಯಕ್ತಿ' | ರಘು ಎಂ. | ಡಾ.ಪುಷ್ಪ ಭಾರತಿ ಆರ್. ಎ. |
| ೭ | 'ಕನ್ನಡ ದಲಿತ ಕಥಾ ಸಾಹಿತ್ಯದ ಪ್ರಾದೇಶಿಕ ವಿನ್ಯಾಸಗಳ ಸ್ವರೂಪ' | ಸುರೇಶ್ ಎಲ್. | ಡಾ. ಮುತ್ತೇಗೌಡ ಟಿ.ಎನ್. |
| ೮ | 'ಕನ್ನಡ ಹವ್ಯಾಸಿ ರಂಗಭೂಮಿಯ ಸವಾಲುಗಳು ಮತ್ತು ಸಾಧನೆಗಳು'(ಆಯ್ದ ಪ್ರಾದೇಶಿಕ ಹವ್ಯಾಸಿ ರಂಗತಂಡಗಳನ್ನು ಅನುಲಕ್ಷಿಸಿ) | ಭರಮಣ್ಣ | ಡಾ. ಎಂ.ಎಸ್. ವಿದ್ಯಾ |

| | | | |
|---|---|---|---|
